

# ಆಮೆ ಮತ್ತು ಮೊಲ

■ ಸದ್ಯೋಜಾತ, ಅಸಗೋಡು
ಕಲೆ: ಸಂತೋಷ್ ಸಸಿಹಿತ್ಲು

ಒಂದು ಶಾಲೆಯಲ್ಲಿ ಆಮೆ ಮತ್ತು ಮೊಲ ಒಂದೇ ತರಗತಿಯಲ್ಲಿ ಓದುತ್ತಿದ್ದವು. ಅವೆರಡು ಒಳ್ಳೆಯ ಸ್ನೇಹಿತರಾಗಿದ್ದವು. ಓದಿನಲ್ಲಿ ತುಂಬಾ ಜಾಣರಾಗಿ ಕ್ಲಾಸಿಗೆ ಮೊದಲಿಗರಾಗಿದ್ದವು. ಪಾಠದಲ್ಲಿ ಮೊದಲಿಗರಿದ್ದಂತೆ ಆಟದಲ್ಲೂ ಶ್ರೇಷ್ಠರೆನಿಸಿಕೊಂಡು ಉಪಾಧ್ಯಾಯರ ಮೆಚ್ಚಿನ ಶಿಷ್ಯರಾಗಿದ್ದವು. ಇವುಗಳ ಸ್ನೇಹ ಕಂಡು ಶಾಲೆಯಲ್ಲಿ ನರಿ ತನ್ನ ಬುದ್ಧಿ ನಡೆಯುತ್ತಿಲ್ಲವಲ್ಲ ಎಂದು ಆಮೆ ಮತ್ತು ಮೊಲದ ಸ್ನೇಹವನ್ನು ಮುರಿಯಬೇಕೆಂದು ಪಿ.ಟಿ. ಮಾಸ್ಟರ್ ಆನೆಯ ಹತ್ತಿರ ಹೋಗಿ ‘ಸಾರ್ ಆಮೆಗೂ ಮತ್ತು ಮೊಲಕ್ಕೂ ಓಟದ ಸ್ಪರ್ಧೆ ಮಾಡಿ ಯಾರು ಗೆಲ್ಲುತ್ತಾರೆಂದು ನಿರ್ಧರಿಸಬೇಕು. ಪಾಠದಲ್ಲಿ ಇಬ್ಬರೂ ಸಮಬಲರಾಗಿರುವುದರಿಂದ ಕ್ರೀಡೆಯಲ್ಲಿ ಯಾರು ಉತ್ತಮರೆಂದು ನೋಡಿದರೆ ಒಟ್ಟಾರೆ ಯಾರು ಉತ್ತಮರೆಂದು ನಿರ್ಧರಿಸಬಹುದು’ ಎಂದು ಪಿನ್ ಹೊಡೆಯಿತು.

ಆನೆ ಬಲಶಾಲಿ ಮತ್ತು ಬುದ್ಧಿವಂತನಾಗಿದ್ದರೂ ನರಿಯ ಮಾತಿಗೆ ಕಿವಿ ಕೊಟ್ಟಿತು. ಮರುವಾರವೇ ಸ್ಪರ್ಧೆ ಏರ್ಪಡಿಸಲಾಯಿತು. ಆಮೆ ಮತ್ತು ಮೊಲ ಓಡಲು ಪ್ರಾರಂಭಿಸಿದವು. ಸ್ಪರ್ಧೆ ಆರಂಭವಾದ ಕೆಲವೇ ಕ್ಷಣದಲ್ಲಿ ಮೊಲ ಓಟದಲ್ಲಿ ಬಹುದೂರ ಹೋಯಿತು. ಆಮೆ ನಿಧಾನವಾಗಿ ಓಡುತ್ತಿತ್ತು. ನರಿಯು ಟ್ರ್ಯಾಕ್ ಪಕ್ಕ ಆಮೆಯ ಹತ್ತಿರ ಬಂದು ನೀನು ಸೋಲುತ್ತೀಯ ನಿನಗೆ ವೇಗವಾಗಿ ಓಡಲು ಆಗುವುದಿಲ್ಲ ಎಂದು ಕಾಲೆಳೆಯಿತು. ಆಮೆ ನರಿಯ ಮಾತಿನಿಂದ ರೋಷಗೊಂಡು ವೇಗವಾಗಿ ಓಡಲಾರಂಭಿಸಿತು. ಆದರೂ ಮೊಲವಾಗಲೇ ವಿಕ್ಟರಿ ಲೈನ್ ಟಚ್ ಮಾಡಿ ವಾಪಸಾಗುತ್ತಿತ್ತು. ಆಮೆ ಸೋಲೊಪ್ಪಿಕೊಳ್ಳದೆ ತಾನೂ ವಿಕ್ಟರಿ ಲೈನ್ ಟಚ್ ಮಾಡಿ ವಾಪಸ್ ಓಡಲು ಆರಂಭಿಸಿತು. ಬಹಳ ಮುಂದೆ ಬಂದಿದ್ದ ಮೊಲ ಸ್ವಲ್ಪ ಸುಧಾರಿಸಿಕೊಂಡು ಹೋಗೋಣವೆಂದು ಪಾರಿವಾಳ ನೀಡಿದ ನೀರು ಮತ್ತು ಹಣ್ಣು ತಿಂದು ವಿಶ್ರಮಿಸಲು ನೋಡಿತು. ತಕ್ಷಣ ತನ್ನ ತಾತ ಆಮೆಯ ತಾತನ ಜೊತೆ ನಡೆದ ಸ್ಪರ್ಧೆಯಲ್ಲಿ ಹೀಗೆ ವಿಶ್ರಮಿಸಿ ಸೋಲನ್ನುಂಡದ್ದು ನೆನಪಾಗಿ ‘ಓಡು ಓಡು ಗುರಿ ತಲುಪುವತನಕ ನಿಲ್ಲಬೇಡ’ ಎಂಬ ವಿವೇಕವಾಣಿ ನೆನಪಾಗಿ ಓಡುವ ಸ್ಪರ್ಧೆಯಲ್ಲಿ ಗೆದ್ದಿತು. ಆಮೆ ತಾನು ಗೆಲ್ಲಲಿಲ್ಲವಲ್ಲ ಎಂದು ಬೇಸರ ಮಾಡಿಕೊಂಡಿತು. ನರಿ ತನ್ನ ಬುದ್ಧಿಗೆ ಹರ್ಷಗೊಂಡಿತು. ಶಾಲೆಯಲ್ಲಿ ನರಿ ಮಾಡಿದ ಕುತಂತ್ರವರಿತ ಆಮೆ, ನರಿಯ ಕುತಂತ್ರದ ಕಥೆಯನ್ನು ಮೊಲಕ್ಕೆ ಹೇಳಿತು. ಮೊಲಕ್ಕೂ ಸ್ನೇಹಿತರ ಮಧ್ಯ ವಿರಸ ತಂದಿಡುವ ನರಿಗೆ ಪಾಠ ಕಲಿಸಬೇಕೆಂದು, ಒಂದು ಉಪಾಯ ಮಾಡಿತು. ಈ ಬಾರಿ ಆಮೆ ಮತ್ತು ಮೊಲ ಎರಡೂ ಪಿ.ಟಿ. ಮಾಸ್ಟರ್ ಆನೆಯ ಬಳಿಗೆ ಹೋಗಿ ಇನ್ನೊಂದು ಓಟದ ಸ್ಪರ್ಧೆ ಇಡಲು ಪುಸಲಾಯಿಸಿದವು. ಈ ಬಾರಿಯ ಸ್ಪರ್ಧೆ ಸ್ವಲ್ಪ ವಿಶೇಷವಾದದ್ದು ಮತ್ತು ವಿಶಿಷ್ಟವಾದದ್ದು. ಸ್ಪರ್ಧೆಯಲ್ಲಿ ಓಟವಿರುತ್ತದೆ ಆದರೆ ಓಟದ ನಿಯಮವೆಂದರೆ ನದಿಯಾಚೆ ಇರುವ ಸವತೆ ಹಣ್ಣನ್ನು ತರಬೇಕು. ಇಬ್ಬರೂ ತಂಡವಾಗಿ ಸ್ಪರ್ಧೆಯಲ್ಲಿ ಭಾಗವಹಿಸಿ ಓಡಿ ಗೆಲ್ಲಬೇಕು ಎಂಬುದು ನಿಯಮ ರೂಪಿಸಿಕೊಂಡವು. ಇದನ್ನು ಹಾಗೂ ಹೀಗೂ ಮಾಡಿ ಪಿಟಿ ಮಾಸ್ಟರ್‌ಗೆ ಒಪ್ಪಿಸಿದವು. ಆಮೆ ಮತ್ತು ಮೊಲ ಸ್ಪರ್ಧೆ ಕಠಿಣವಾಗಿದ್ದರಿಂದ ಸ್ಪರ್ಧೆಯಲ್ಲಿ ಯಾರೂ ಭಾಗವಹಿಸಲು ತಯಾರಾಗಲಿಲ್ಲ. ನರಿ ಮತ್ತು ಮಂಗ ಒಂದು ಜೋಡಿಯಾಗಿ ಓಡಲು ಸಿದ್ಧವಾದವು. ಆಮೆ ಮತ್ತು ಮೊಲ ಎರಡನೇ ಜೋಡಿಯಾಗಿ ಸ್ಪರ್ಧೆಯಲ್ಲಿ ಭಾಗವಹಿಸಿದವು. ನದಿಯ ದಂಡೆಯತನಕ ನರಿ ಮತ್ತು ಮಂಗ ಜೋರಾಗಿ ಓಡಿ ದಡದಲ್ಲಿ ನಿಂತವು. ನದಿ ದಾಟುವುದು ಹೇಗೆಂದು ಎಷ್ಟು ಪ್ರಯತ್ನಿಸಿದರೂ ನದಿಯ ರಭಸ ನೋಡಿ ಸಾಧ್ಯವಿಲ್ಲವೆಂದು ಕುಳಿತವು. ಆಮೆ ಮತ್ತು ಮೊಲ ನಿಧಾನವಾಗಿ ನದಿ ಹತ್ತಿರ ಬಂದವು. ದಡದಲ್ಲಿ ನರಿ ಮತ್ತು ಮಂಗ ಹ್ಯಾಪ್ ಮೋರೆ ಮಾಡಿಕೊಂಡು ಕುಳಿತಿರುವುದನ್ನು ನೋಡಿ ಮುಸಿ ಮುಸಿ ನಕ್ಕವು. ಆಮೆ ಮೊಲಕ್ಕೆ ಗೆಳೆಯ ನನ್ನ ಬೆನ್ನು ಏರಿ ಕುಳಿತುಕೋ ನಾವು ನದಿ ದಾಟೋಣ ಎಂದು ಮೊಲವನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ನದಿಯನ್ನು ನಿರಾಯಾಸವಾಗಿ ದಾಟಿದವು. ನಂತರ ಮೊಲ ಸವತೆ ಬಳ್ಳಿಯಲ್ಲಿದ್ದ ಒಳ್ಳೆಯ ಹಣ್ಣನ್ನು ಕಿತ್ತುಕೊಂಡು ಹೊರಟವು. ಆಮೆ ಮತ್ತು ಮೊಲ ಸರತಿಯಂತೆ ಸವತೆ ಹಣ್ಣನ್ನು ಸ್ವಲ್ಪ ಹೊತ್ತು ಆಮೆಯ ಬೆನ್ನ ಮೇಲೆ ಮತ್ತಷ್ಟು ಹೊತ್ತು ಮೊಲ ತನ್ನ ಬೆನ್ನ ಮೇಲೆ ಹೊತ್ತು ತಂದು ಪಿ.ಟಿ. ಮಾಸ್ಟರ್ ಮುಂದೆ ಇಟ್ಟವು. ನಿರಾಸೆಯಿಂದ ಮರಳಿ ಬಂದ ನರಿ ಮತ್ತು ಮಂಗ ತಲೆ ತಗ್ಗಿಸಿ ನಿಂತವು. ಉಳಿದ ಗೆಳೆಯರು ಆಮೆ ಮತ್ತು ಮೊಲದ ಟೀಮ್ ವರ್ಕ್, ಅವರ ಸಾಮರ್ಥ್ಯಕ್ಕೆ ತಕ್ಕಂತೆ ಹಂಚಿಕೊಂಡು ನಿಭಾಯಿಸಿದ್ದನ್ನು ಶ್ಲಾಘಿಸಿದವು. ■